**ಅಸಲು ದಾವ ಸಂಖ್ಯೆಃ 566/2016**

**ಪಿ.ಡಬ್ಲೂ -1**

ದಿಃ 20-09-2022. ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಪಾಟೀ ಸವಾಲು ಶ್ರೀ RGM ರವರಿಂದಃ-**

1. ನಾನು ಬಿಸಿನೆಸ ಮಾಡುತ್ತಿದ್ದೇನೆ. ನನಗೆ ಇಂಗ್ಲೀಷ ಮತ್ತು ಕನ್ನಡ ಓದಲು ಬರೆಯಲು ಬರುವುದಿಲ್ಲ. ಈ ಕೇಸನ್ನು ದಾಖಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಈ ದಾವೆಯನ್ನು ಸಿಟಿಎಸ ಸಂಖ್ಯೆ 946 ಮತ್ತು 946/1 ಕ್ಕೆ ಸಂಬಂಧಿಸಿದಂತೆ ಸಲ್ಲಿಸಲಾಗಿದೆ. ದಾವಾ ಆಸ್ತಿಗಳಲ್ಲಿ ಎ ಶೆಡ್ಯೂಲ ಆಸ್ತಿಯನ್ನು ನಾನು DRT ಯಿಂದ ಖರೀದಿಸಿರುತ್ತೇನೆ. ಮತ್ತು ದಾವಾ ಬಿ ಶೆಡ್ಯೂಲ ಆಸ್ತಿಯನ್ನು ಅರವಿಂದ ಸದಾಶಿವ ಹೆರವಾಡಕರವರಿಂದ ಖರೀದಿಸಿರುತ್ತೇನೆ. ದಾವಾ ಆಸ್ತಿಗಳ ಸಿಟಿಎಸ ಉತಾರೆಯನ್ನು ನಾನು ನೋಡಿರುತ್ತೇನೆ. ಸಿಟಿಎಸ ಉತಾರೆಯ ಕಬ್ಜೆದಾರರ ಕಾಲಂನಲ್ಲಿ 1 ನೇ ಪ್ರತಿವಾದಿಯ ಹೆಸರು ನಮೂದು ಇದೆ ಎಂದರೆ ಸರಿ. ದಾವಾ ಆಸ್ತಿಗಳು ಮೂಲತಃ 1 ನೇ ಪ್ರತಿವಾದಿಯದ್ದು ಎಂದರೆ ಸರಿ. ಈಗಲೂ ಸಹ ದಾವಾ ಆಸ್ತಿಗಳು 1 ನೇ ಪ್ರತಿವಾದಿಯ ಮಾಲಿಕತ್ವದಲ್ಲಿದೆ ಎಂದರೆ ಸರಿಯಲ್ಲ. ಹೆರವಾಡಕರಅವರಿಂದ ದಾವಾ ಆಸ್ತಿಯನ್ನು ಖರೀದಿಸಿದಾಗ 1 ನೇ ಪ್ರತಿವಾದಿಯಿಂದ ಎನಒಸಿಯನ್ನು ಪಡೆದಿಲ್ಲ. ದಾವಾ ಆಸ್ತಿಗಳಲ್ಲಿ ನಾನು 2007 ರಲ್ಲಿ ಕಟ್ಟಡ ನಿರ್ಮಿಸಿರುತ್ತೇನೆ. ದಾವಾ ಆಸ್ತಿಯಲ್ಲಿ ಕಟ್ಟಡವನ್ನು ನಿರ್ಮಿಸುವಾಗ 1 ನೇ ಪ್ರತಿವಾದಿಯಿಂದ ಪರವಾನಿಗೆಯನ್ನು ಪಡೆದಿರುತ್ತೇನೆ. ಸದರಿ ಪರವಾನಿಗೆಯನ್ನು 2007 ರಲ್ಲಿ ಪಡೆದಿರುತ್ತೇನೆ. ಸದರಿ ಪರವಾನಿಗೆಯನ್ನು ನೆಲ ಮಹಡಿ ಮತ್ತು ಮೊದಲನೆ ಮಹಡಿಯ ನಿರ್ಮಾಣಕ್ಕಾಗಿ ಪಡೆದಿದ್ದೇನು. ಸದರಿ ಪರವಾನಿಗಯನ್ನು ನಾನು ಈ ನ್ಯಾಯಾಲಯದಲ್ಲಿ ಹಾಜರಪಡಿಸಿಲ್ಲ. ದಾವಾ ಆಸ್ತಿಯಲ್ಲಿ ಕಟ್ಟಡ ನಿರ್ಮಾಣ ಸಂಪೂರ್ಣಗೊಂಡ ನಂತರ ಸದರಿ ಕಟ್ಟಡವು ಸಂಪೂರ್ಣಗೊಂಡ ಬಗ್ಗೆ ದೃಡಿಕರಣ ಪತ್ರವನ್ನು ಪಡದುಕೊಂಡಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ಕಟ್ಟಡ ನಿರ್ಮಿಸಲು ಪರವಾನಿಗೆಯನ್ನು ಪಡೆದಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಬಗ್ಗೆ ಇನ್ನೊಂದು ದಾವೆ ಚಾಲ್ತಿಯಲ್ಲಿರುವ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಬಗ್ಗೆ ಕೇಸು ಚಾಲ್ತಿಯಲ್ಲಿರುವ ವಿಚಾರ ನನಗೆ ಗೊತ್ತಿದ್ದರು ಸಹ ಅಕ್ರಮವಾಗಿ ನಾನು ದಾವಾ ಸ್ವತ್ತನ್ನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನಲ್ಲಿ ನಾನು ಅಕ್ರಮವಾಗಿ ಸ್ವಾಧಿನದಲ್ಲಿದ್ದೇನೆ ಎಂದರೆ ಸರಿಯಲ್ಲ . ಈಗಲೂ ಸಹಿತ ದಾವಾ ಆಸ್ತಿಗೆ ಸಂಬಂಧಿಸಿದಂತೆ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ WP No.100488/16 ಚಾಲ್ತಿಯಲ್ಲಿ ಇದೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಮಾಲಿಕತ್ವ ಇಲ್ಲದೆ ಇದ್ದರೂ ಕಾನೂನು ಬಾಹಿರವಾಗಿ ನಾನು ದಾವಾ ಸ್ವತ್ತಿನ ಸ್ವಾಧಿನತೆಯನ್ನು ಹೊಂದಿದ್ದೇನೆ ಎಂದರೆ ಸರಿಯಲ್ಲ.

**2 ರಿಂದ 4 ಮತ್ತು 6 ನೇ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ಸಮಯ ನೀಡಲಾಯಿತು.**
**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**

(ಸಾಕ್ಷಿಗೆ  ಕನ್ನಡ ಭಾಷೆ ಬರುವುದಿಲ್ಲ ಎಂದು ವಕೀಲರು ಹೇಳಿದ ಕಾರಣ ಹಿಂದಿ (ಮರಾಠಿ) ಭಾಷೆ  ಮತ್ತು ಕನ್ನಡ ಭಾಷೆ ತಿಳಿದಿದೆ ಎಂದು ಹೇಳಿರುವ ವಕೀಲರಾದ ಶ್ರೀಮತಿ ಎಸ್.ಎಸ್.ಜೆ ರವರನ್ನು ತರ್ಜುಮೆದಾರರಾಗಿ ನೇಮಕ ಮಾಡಿದ್ದು ಸದರಿಯವರು ಪ್ರತಿವಾದಿಯರ ಪರ ವಕೀಲರು ಕನ್ನಡದಲ್ಲಿ ಕೇಳಿದ ಪ್ರಶ್ನೆಗಳನ್ನು ಮರಾಠಿಗೆ ತರ್ಜುಮೆ ಮಾಡಿ ಸಾಕ್ಷಿಗೆ ಹೇಳಲು , ಸಾಕ್ಷಿಯು ಮರಾಠಿಯಲ್ಲಿ ಹೇಳಿದ ಉತ್ತರವನ್ನು ಕನ್ನಡಕ್ಕೆ ತರ್ಜುಮೆ ಮಾಡಿ ಹೇಳಲು ಒಪ್ಪಿಕೊಂಡಿರುತ್ತಾರೆ. ರೂ.200/- ನ್ನು ತರ್ಜುಮೆದಾರರ ಫೀ ಎಂದು ನಿಗದಿಪಡಿಸಿದ್ದು ವಾದಿಯು ಸದರಿ ಫೀಯನ್ನು ನೀಡಲು ಆದೇಶಿಸಲಾಗಿದೆ.)

**ಪ್ರಕರಣವನ್ನು ಸಾಕಷ್ಟು ಬಾರಿ ಕರೆಯಿಸಿದರೂ ಸಹ ಪ್ರತಿವಾದಿ ಮತ್ತು ಅವರ ಪರ ವಕೀಲರು ಗೈರು ಹಾಜರಿಯಾಗಿರುತ್ತಾರೆ. ಈಗಾಗಲೇ ಸಾಕ್ಷಿಯ ಪಾಟೀ ಸವಾಲಿಗೆಂದು ಸಾಕಷ್ಟು ಕಾಲಾವಕಾಶವನ್ನು  ನೀಡಿರುವುದರಿಂದ ಮುಂದಿನ ದಿನಾಂಕವನ್ನು ನೀಡಲು ಯಾವುದೇ ಸೂಕ್ತ ಕಾರಣ ಇರುವುದಿಲ್ಲ. ಆದುದರಿಂದ ಸಾಕ್ಷಿಯ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**